# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No.668/2025

| | | |
|---|---|---|
| **ಹೆಸರುಃ** | **ಕಿಶೋರ್ ಕುಮಾರ್ ಬಂಗೇರಾ** | **DW-1** |
| **ತಂದೆ/ಗಂಡ ಹೆಸರುಃ** | **ಬಿ.ಕೃಷ್ಣಪ್ಪ** | |
| **ವಯಸ್ಸುಃ** | **53 ವರ್ಷ** | |
| **ವೃತ್ತಿಃ** | **ಕನ್ನಡಕ ವ್ಯಾಪಾರ** | |
| **ವಿಳಾಸಃ** | **ಮಂಗಳೂರು** | **ದಿನಾಂಕಃ10/08/2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ.ಹೆಚ್.ಎಲ್.ಡಿ.ವಕೀಲರಿಂದ,**

ನನಗೆ ದೂರುದಾರರು ಕನ್ನಡಕ ವ್ಯಾಪಾರದಲ್ಲಿ ಹಾಸನದ ದ್ರಾಕ್ಷಾಯಿಣಿರವರ ಮೂಲಕ 2020ರಿಂದ ಪರಿಚಯವಿರುತ್ತಾರೆ. ದಿಃ04/09/2022ರಿಂದ ನಾನು ದೂರುದಾರರೊಂದಿಗೆ ಹಣಕಾಸಿನ ವ್ಯವಹಾರ ಮಾಡಿರುತ್ತೇನೆ. ದೂರುದಾರರು ನನಗೆ ರೂ.8ಲಕ್ಷ ಸಾಲ ನೀಡಿದ್ದು, ಅದಕ್ಕೆ ಬಡ್ಡಿ ಸೇರಿಸಿ ಹೆಚ್ಚು ಹಣಕ್ಕೆ ಒತ್ತಾಯ ಮಾಡಿರುತ್ತಾರೆ. ನಾನು ದೂರುದಾರರ ಖಾತೆಯಿಂದ ರೂ.8ಲಕ್ಷ ಸಾಲ ಪಡೆದಿರುತ್ತೇನೆ. ನನ್ನ ವ್ಯಾಪಾರದಲ್ಲಿ ನಷ್ಟ ಉಂಟಾಗಿದ್ದರಿಂದ 2023ರಲ್ಲಿ ನಾನು ರೂ.2ಲಕ್ಷ ಸೇರಿಸಿ ಒಟ್ಟು ರೂ.10ಲಕ್ಷ ಹಣವನ್ನು ಆರೋಪಿಗೆ ಮರುಪಾವತಿ ಮಾಡಿರುತ್ತೇನೆ. ಅದನ್ನು ಹೊರತು ಪಡಿಸಿ ನಾನು ದೂರುದಾರರಿಂದ ಯಾವುದೇ ಸಾಲ ಪಡೆದಿಲ್ಲ. ನಿಪಿ-1, 3 ಮತ್ತು 5 ಚೆಕ್ಕುಗಳನ್ನು ನಾನು ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ದ್ರಾಕ್ಷಾಯಿಣಿರವರಿಗೆ ನೀಡಿರುತ್ತೇನೆ. ದೂರುದಾರರು ಅದನ್ನು

ದುರುಪಯೋಗ ಪಡಿಸಿಕೊಂಡು ಈ ಕೇಸನ್ನು ಹಾಕಿರುತ್ತಾರೆ. ನನಗೆ ದೂರುದಾರರು ಯಾವುದೇ ನೋಟೀಸನ್ನು ಕಳುಹಿಸಿರುವುದಿಲ್ಲ. ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಾಗ ಈ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ. ದೂರುದಾರರು ನಗದು ಮೂಲಕ ಯಾವುದೇ ಹಣ ನೀಡಿರುವುದಿಲ್ಲ. ಆದ್ದರಿಂದ ಯಾವುದೇ ವ್ಯವಹಾರ ಇಲ್ಲದೇ ಇರುವುದರಿಂದ ಈ ಪ್ರಕರಣವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**